ಕೇಳಿದನೋ, ಶಕುನ ಪರೀಕ್ಷಿಸಿದನೋ 'ಈ ಸಲವೂ ಹೆಣ್ಣು ಹುಟ್ಟಿದರೆ ಗಂಡನಿಗೆ ಹುಚ್ಚು ಹಿಡಿಯುತ್ತದೆ' ಎಂಬಷ್ಟು ಕಂಗಾಲಾಗಿದ್ದಳು ನಳಿನಿ. ಹಾಗಿತ್ತು ಅವನ ಚಡಪಡಿಕೆ. ಆ ಸಲ ಮಗ ಹುಟ್ಟಿದ. ಗಂಡನ ಕನಸನ್ನು ಸಾಕಾರಗೊಳಿಸಿದ. ಮುಂದೆ ಮಕ್ಕಳಾಗದಂತೆ ವ್ಯವಸ್ಥೆ ಮಾಡಿಕೊಂಡಿದ್ದೂ ಆಯಿತು.

'ಮತ್ತೇನು ಗುನುಗು? ಹೆಣ್ಣು, ಗಂಡು ಎರಡೂ ಆದುವಲ್ಲ. ಕತೆ ಸುಖಾಂತವಾಯ್ತು' ಎನ್ನುತ್ತಾ ಸಮಾಧಾನದ ನಿಟ್ಟುಸಿರ್ಗರೆದಳು ಮಮತಾ. ಕತೆ ಮುಗಿಯಲಿಲ್ಲ. ಮುಂದುವರಿಯಿತು. ತಂದೆಯಾದವನು ತನ್ನಿಬ್ಬರು ಮಕ್ಕಳಲ್ಲಿ ಪಕ್ಷಪಾತ ಮಾಡುತ್ತಲೇ ಬಂದ. ಮಗನನ್ನು ತಲೆಯ ಮೇಲೆ ಕೂರಿಸಿಕೊಂಡರೆ ಮಗಳು ಕಾಲಬುಡದಲ್ಲಿ. 'ಹೀಗೂ ಉಂಟಾ?' ಎಂದು ಯಾರಾದರೂ ಅಂದುಕೊಳ್ಳಬಹುದಾದ ನಡವಳಿಕೆ. ಆದರೆ ಯಾರಿಗೂ ಸಮಸ್ಯೆಯ ಗಾಂಭೀರ್ಯ ಅರ್ಥವಾಗದಂತಾ ಬುದ್ಧಿವಂತಿಕೆ. ಮಗನಿಗೆ ಕೇಳಿದ್ದು ಕೈಗೆಟುಕುತ್ತಿತ್ತು ಮತ್ತು ಮಗಳು ಕೇಳುವುದಕ್ಕೇ ಹಿಂಜರಿಯುವಂತೆ ಅಪ್ಪನ ವರ್ತನೆ ಅರಿವು ಮಾಡಿಕೊಟ್ಟಿತ್ತು.

''ಹೇಳುವುದಕ್ಕೆ ಬರದಂತಾ ಒಂದು ವಿಚಿತ್ರ ಪರಿಸ್ಥಿತಿಯನ್ನು ಹಾದು ಬಂದಿದೀನಿ ಕಣೇ. 'ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ' ಅಂದ್ರೆ ಅರ್ಥ ಮಾಡ್ಕೋತಿ ಅಂದ್ಕೊಂಡಿದೀನಿ" ನಳಿನಿ ಕಣ್ಣೊರೆಸಿಕೊಂಡಿದ್ದಳು.

"ಪಾಪದ ಹುಡುಗಿ. ಅದಕ್ಕೆ ಅಪ್ಪನ ಪ್ರೀತಿ ಅನ್ನೋದು ದಕ್ಕಲೇ ಇಲ್ಲ. ಅದು ಬೇಕು, ಇದು ಬೇಕು ಎಂದು ಯಾವತ್ತೂ ಹಟ ಮಾಡಿದವಳಲ್ಲ ನನ್ನ ಮಗಳು. ತನಗೆ ಎಷ್ಟು ಲಭ್ಯವೋ ಅಷ್ಟೇ ಲಭ್ಯ ಎನ್ನುವುದನ್ನು ಆ ವಯಸ್ಸಿಗೇ ಅರ್ಥ ಮಾಡಿಕೊಂಡವಳಂತೆ ತನ್ನ ಅಳವಿನಲ್ಲಿ ಸಾಧಿಸಬಹುದಾದ್ದನ್ನು ಸಾಧಿಸಿ ತೋರಿಸಿದಳು. ಎಂಜಿನಿಯರಿಂಗ್ ಓದಬೇಕೆಂಬ ಮಹದಾಸೆಯ ಹುಡುಗಿಗೆ ಅದಕ್ಕೆ ತಕ್ಕ ಅರ್ಹತೆ ಇದ್ದರೂ ಅಪ್ಪ ಹಸಿರುನಿಶಾನೆ ತೋರಿಸಲಿಲ್ಲ. 'ಅದೆಲ್ಲಾ ಹುಡುಗರಿಗೆ...' ಅಂದುಬಿಟ್ಟ ಹಳೆಗಾಲದ ಮುದುಕನಂತೆ. ಬಿ.ಎಸ್ಸಿ. ಓದಿದಳು ಮಗಳು. ಬ್ಯಾಂಕಿನಲ್ಲಿ ನೌಕರಿ ಗಿಟ್ಟಿಸಿಕೊಂಡಳು. ಆಗಲಾದರೂ ಮಗಳ ಕುರಿತಾದ ಹೆಮ್ಮೆ? ಊಹೂಂ. 'ಏನೋ ಅದೃಷ್ಟ ಇತ್ತು. ಕೆಲಸ ಸಿಕ್ತು' ಅಂದನೇ ವಿನಾ ಮಗಳು ಜಾಣೆ ಅನ್ನುವುದನ್ನು ಒಪ್ಪಿಕೊಳ್ಳಲಿಲ್ಲ. ಮಗಳಿಗೆಂದು ಬ್ಯಾಂಕ್ ನೌಕರಿಯಲ್ಲಿದ್ದ ಹುಡುಗನನ್ನು ಹುಡುಕಿ ಮದುವೆ ಮಾಡಿದ ಅನ್ನಲೇ? ಅಥವಾ ಗಂಡಿನ ಪೈಕಿಯವರು ಅವರಾಗಿ ಕೇಳಿಕೊಂಡು ಬಂದರು ಅನ್ನಲೇ? ಎರಡೂ ಒಂದೇ ಅನ್ನುತ್ತೀಯಾ? 'ನಿನಗೆ ಹುಡುಗ ಇಷ್ಟವಾದನೇ?' ಎಂದು ಅಪ್ಪ ಕೇಳಲಿಲ್ಲ. ಇವಳೂ ನಿರಾಕರಣೆಯ ಮಾತಾಡಲಿಲ್ಲ. 'ತನ್ನ ಕರ್ತವ್ಯ ಮುಗಿಯಿತು' ಎಂದು ಪ್ರಕಟವಾಗಿಯೇ ಹೇಳುತ್ತಾ ಬೆನ್ನು ನೆಟ್ಟಗೆ ಮಾಡಿಕೊಂಡು ಓಡಾಡಿದ ಅಪ್ಪ.

ಅದೃಷ್ಟ ಅನ್ನುವುದು ನಿಜಕ್ಕೂ ಇರುತ್ತದೆ ಅನಿಸುತ್ತದೆ. ಒಂದೊಂದೇ ಬ್ಯಾಂಕ್ ಪರೀಕ್ಷೆಗಳನ್ನು ಪಾಸು ಮಾಡಿಕೊಂಡು ಅಳಿಯ ಹಾಗೂ ಮಗಳು ಎತ್ತರೆತ್ತರಕ್ಕೆ ಬೆಳೆಯುತ್ತಾ ಹೋದರು. 'ಇವಳಿಗೆ ಇದೆಲ್ಲಾ ಬೇಕಾಗಿತ್ತಾ? ಎಷ್ಟಾದ್ರೂ ಜವಾಬ್ದಾರಿ ಜಾಸ್ತಿ' ಎಂದು ಮಗಳು ತಂದುಕೊಟ್ಟ ಪೇಡಾ ಮೆಲ್ಲುತ್ತಾ ಬಾಯ್ಬಿಟ್ಟಿತ್ತು ಸವಾರಿ. ಮಗಳು ಮುಗುಳ್ನಕ್ಕಿದ್ದಳು ಅಷ್ಟೇ. 'ನಾನು ಹೇಳುತ್ತಿರೋದು ಮಗಳು ಅನುಭವಿಸಿಕೊಂಡು ಬಂದ ತಾತ್ಸಾರದ ನೂರರಲ್ಲಿ ಹತ್ತು ಪಟ್ಟೂ ಇಲ್ಲ ಕಣೇ. ಹೆಣ್ಣುಹುಡುಗಿ ಏನೇ ಮಾಡಿದ್ರೂ, ಏನೇ ಸಾಧಿಸಿದ್ರೂ ಅದೊಂದು ದೊಡ್ಡ ವಿಷಯವೇ ಅಲ್ಲ ಎನ್ನುವಂತೆ ಕೊಂಕುಮಾತಿನ ಅಕ್ಷತೆ' ಮುಂದುವರಿಸಿದ್ದಳು ನಳಿನಿ.

'ತುಳಿದಷ್ಟೂ ಪುಟಿದೇಳುವುದು ಅನ್ನುವುದು ನನ್ನ ಮಗಳ ವಿಷಯದಲ್ಲಿ ನಿಜ. ಒಂದರಲ್ಲಿ ಕೊರತೆ ಮಾಡಿದ ವಿಧಿ ಅದನ್ನು ಮತ್ತೊಂದು ರೂಪದಲ್ಲಿ ತುಂಬಿಕೊಟ್ಟಿತ್ತು. ಅಳಿಯ ಒಳ್ಳೆಯವನು. ಹೃದಯವಂತಿಕೆ ಇರುವವನು. ಹೆಂಡತಿಯ ಏಳಿಗೆಗೆ ಕರುಬದೆ ಸಹಕರಿಸುವ ದೊಡ್ಡಮನುಷ್ಯ. ಎಷ್ಟೇ ಸಮಾಧಾನ ತಂದುಕೊಂಡರೂ ಒಂದೊಂದು ಸಲ ಮನಸ್ಸಿಗೆ ಕಿರಿಕಿರಿಯಾಗುತ್ತೆ ಮಾರಾಯ್ತಿ. ನನ್ನ ಮಗಳಿಗೆ ಅಪ್ಪನ ಪ್ರೀತಿ, ಪ್ರೋತ್ಸಾಹ, ಮೆಚ್ಚುಗೆ ಯಾವುದೂ ಸಿಗಲಿಲ್ಲ. ಯಾರದ್ದೋ ಮಗುವನ್ನು ವಿಧಿ ಇಲ್ಲದೆ ಸಾಕಬೇಕಾಗಿ ಬಂದವನಂತೆ ಕರ್ತವ್ಯದ ದೃಷ್ಟಿಯಲ್ಲಿ ಸಾಕಿದ ಅಷ್ಟೇ...'

'ಮಗ?' ಕೇಳಿದಳು ಮಮತಾ ಕುತೂಹಲದಿಂದ.

'ಅವನೂ ಜಾಣನೇ. ಆದರೆ ಅಕ್ಕನಷ್ಟಲ್ಲ. ಅವನಿಗೆ ಬೇಕಾದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬೇಕಾದ್ದನ್ನು ಓದಿಸಲು ದೊಡ್ಡ ಮೊತ್ತದ ಡೊನೇಷನ್ ಕೊಡಬೇಕಾಯ್ತು. ಉಸಿರೆತ್ತದೆ ಕೊಟ್ಟರು ಅಪ್ಪ. ತಪ್ಪೇನಾಗಲಿಲ್ಲ. ಚೆನ್ನಾಗಿ ಓದಿದ. ಕೆಲಸವೂ ಸಿಕ್ಕಿತು. ತಾನು ಮೆಚ್ಚಿದವಳನ್ನು ಮದುವೆಯಾಗಿ ಸುಖವಾಗಿದ್ದಾನೆ...'

''ನಿನ್ನ ಮಾತು ಕೇಳ್ತಿದ್ರೆ ಅಪ್ಪ ಮಗಳ ವಿಷಯದಲ್ಲಿ ಮಾಡಿದ ತಪ್ಪನ್ನು ನೀನು ಮಗನ ವಿಷಯದಲ್ಲಿ ಮಾಡ್ತಿದ್ದಿ ಅನ್ಸುತ್ತೆ ಕಣೇ. ಸತ್ಯ ಹೇಳು...'

'ಛೇ, ದೇವರಾಣೆ ಇಲ್ಲ. ಅವನ ವಿಷಯದಲ್ಲಿ ಮನಸ್ಸಿಗೆ ಕಹಿಯಾಗುವಂತಾದ್ದೇನೇನೋ ನಡೀತು. ಅದಕ್ಕೇ...'

'...'

'ಇಷ್ಟು ಹೇಳಿದ ಮೇಲೆ ಇನ್ನೇನು ಮುಚ್ಚುಮರೆ? ಈ ಗಂಡಸರು ಬಹಳ ಬುದ್ಧಿವಂತರು, ವ್ಯವಹಾರಸ್ಥರು ಅಂತ ಎಷ್ಟೋ ಜನ ಹೆಂಗಸರು ಕುರುಡಾಗಿ ನಂಬಿಕೊಂಡುಬಿಟ್ಟಿರ್ತಾರೆ ಕಣೇ. ನನ್ನ ಹಾಗೆ...'

'ಈಗೇನಾಯ್ತು?'

'ಮನೇಲಿ ಹೆಂಡತಿಯ ಹತ್ತಿರ, ಬೆಳೆದ ಮಕ್ಕಳ ಹತ್ತಿರ ಒಂದು ಮಾತು ಕೇಳ್ಬೇಕೋ, ಬೇಡ್ವೋ? ನಮ್ಮನೆಯೋರಿಗೆ ಒಬ್ಬ ಪರಮಸ್ನೇಹಿತ ಇದ್ದ. ಗಳಸ್ಯ ಕಂಠಸ್ಯ ಅನ್ನೋ ಥರ. ತುರ್ತಿಗೆ ಯಾವುದೋ ಸಾಲ ತೆಗೆದವನಿಗೆ ಈ ಮನುಷ್ಯನ ಜಾಮೀನು...'

'ಅಯ್ಯೋ...'

'ಅಷ್ಟೆಲ್ಲಾ ಗಾಬರಿ ಬೀಳ್ಬೇಡ. ಮುಳುಗಿ ಹೋಗುವಂತಾದ್ದೇನಲ್ಲ. ಐದು ಲಕ್ಷದ ಸಾಲ. ಅವನು ತೀರಿಸಲಿಲ್ಲ. ಮೇಲಿಂದ ಕರೆ ಬಂತು ಅವನಿಗೆ. ನೊಟೀಸು ಇವರಿಗೆ...'

'ಕಾಲೇಜಲ್ಲಿ ಮೇಷ್ಟ್ರಾಗಿದ್ದ ನಮ್ಮನೆಯೋರಿಗೆ ಒಳ್ಳೇ ಸಂಬಳಾನೇ ಬರ್ತಿತ್ತು. ಮಗ ದೊಡ್ಡ ಫ್ಲ್ಯಾಟ್ ಖರೀದಿಸಿದ ಅನ್ನೋ ಕಾರಣಕ್ಕೆ ಕೈಲಿದ್ದಿದ್ದನ್ನೆಲ್ಲಾ ಕೊಟ್ಟು ಖಾಲಿ ಮಾಡ್ಕೊಂಡಿದ್ರು. ಮಗಳು ಮನೆ ಗಿನೆ ಅಂತ ಒದ್ದಾಡ್ತಿರ್ಬೇಕಾದ್ರೆ ಕೈಬಿಚ್ಚಿ ಕೊಡ್ದಿದ್ದೋರು ಮಗನಿಗೆ ಧಾರಾಳವಾಗಿ ದುಡ್ಡು ಕೊಟ್ರು ನೋಡು. ಆಗ್ಬೇಕು ಹಂಗೇ... 'ಮಗ ಮೂರೂವರೆ ಕೋಟಿಯ ಮನೆ ತಗೊಂಡ' ಅಂತ ಎಲ್ಲರ ಹತ್ರಾನೂ ಹೇಳುವಾಗ ದನಿಯಲ್ಲಿ ಅದೆಷ್ಟು ಜಂಭ ಇರ್ತಿತ್ತು ಗೊತ್ತಾ?'

'ನೀನೂ ಅತೀ ಆಡ್ತಿ. ಮಕ್ಕಳು ಆಸ್ತಿ ಮಾಡ್ಕೊಂಡ್ರೆ ಹೆತ್ತೋರಿಗೆ ಹೆಮ್ಮೆ ಅಲ್ವಾ?'

'ಹೌದು ಮಾರಾಯ್ತೀ, ಯಾಕೆ ಇಲ್ಲ ಅನ್ನಿ? ನಂಗೂ ಕೋಡು ಬಂದಂತಾಗಿದ್ದು ಹೌದೇ ಹೌದು. ಐದು ಲಕ್ಷದ ಹೊರೆ ವಿನಾಕಾರಣ ತಲೇ ಮೇಲೆ ಬಂದಾಗ ಸ್ವಲ್ಪ ಕಂಗಾಲಾಗಿ ಹೋದ್ರು. 'ನನ್ಹತ್ರ ಈಗ ಅಷ್ಟು ದುಡ್ಡಿಲ್ಲ ಅಪ್ಪಾ. ಎಲ್ಲಾ ಸಾಲಕ್ಕೆ ಹೋಗ್ತಿದೆ' ಅಂತ ಮಗ ಕೈಯಾಡಿಸಿಬಿಟ್ಟ. ಈ ಸಾಲ ತೀರಿಸಿದ್ದು ಮಗಳು...'

'ಕೊನೆಗೂ ನಿನ್ನ ಗಂಡ ಮಗಳ ಹತ್ರ ಸಹಾಯ ಕೇಳಿದ್ರು ಅನ್ನು...'

'ಅವರ ಅಹಂ ಬಿಡ್ಬೇಕಲ್ಲ? ನಾನೇ 'ಹೀಗ್ಹೀಗೆ' ಅಂತ ಅವಳಿಗೆ ಹೇಳಿದ್ದು. ಅವಳು ಹಿಂದೆ ಮುಂದೆ ಯೋಚನೆ ಮಾಡ್ದೆ ದುಡ್ಡು ಕೊಟ್ಟಿದ್ದು...'

'ತಗೊಂಡ್ರು ತಾನೇ?'

'ತಗೊಳ್ದೆ? ಸಾಕಿಲ್ವಾ? ಬೆಳೆಸಿಲ್ವಾ? ಓದಿಸಿಲ್ವಾ? ಮದುವೆ ಮಾಡಿಲ್ವಾ? ಅಂತ ಧೋರಣೆ ಮಾತಾಡ್ತಾನೇ ತಗೊಂಡ್ರು ಅನ್ನು. 'ಇದೆ, ಕೊಡ್ತಾಳೆ' ಅನ್ನೋ ಒಗ್ಗರಣೆ ಬೇರೆ. ಅದಕ್ಕೇ ಬೇಜಾರಾಗಿದ್ದು ನಂಗೆ. ಕೊನೆಗೂ ಅವಳು ಮಾಡಿದ ಉಪಕಾರ ಲೆಕ್ಕಕ್ಕೆ ಬರ್ಲಿಲ್ಲ...'

'ಬಂದಿರುತ್ತೆ ಕಣೇ, ತೋರಿಸ್ಕೊಂಡಿರಲ್ಲ...'

'ಒಳಗಿಂದೊಳಗೆ ಮೆಚ್ಚಿಕೊಂಡ್ರೆ ಸಾಲ್ದು. ಕೆಲವು ಸಲ ಬಾಯಿ ಬಿಟ್ಟು ಹೇಳಲೂ ಬೇಕಾಗುತ್ತೆ. ಸಹಾಯ ಮಾಡಿದೋರಿಗೆ ಒಂಥರದ ಸಾರ್ಥಕಭಾವ ಸಿಗುತ್ತೆ' ಹೇಳಿದಳು ನಳಿನಿ.

'ಎಲ್ಲಾ ಮೊನ್ನೆ ಮೊನ್ನೆ ನಡೆದ ಕತೆ ಇರ್ಬೇಕು...'

'ಹೌದು ಕಣೇ, ಅದಕ್ಕೇ ಗಾಯ ಹಸಿಯಾಗಿದೆ. ಅಪ್ಪನಾದೋನು ಮಗಳ ಬಗ್ಗೆ ಒಂದು ಒಳ್ಳೇ ಮಾತಾಡ್ಲಿಲ್ವಲ್ಲಾ ಅಂತ ಸಂಕಟವಾಗುತ್ತೆ. ವಿದ್ಯಾವಂತರು ಅನ್ನಿಸ್ಕೊಂಡೋರೂ ಹೆಣ್ಣುಮಕ್ಕಳ ಬಗ್ಗೆ ಕೇವಲವಾಗಿ ನಡೆದುಕೊಳ್ಳೋದನ್ನ ಈಗಲಾದ್ರೂ ಒಪ್ತೀಯಾ?'

'ಎಲ್ಲೋ ಕೆಲವರು...' ಅಂದಳು ಮಮತಾ.

'ಹೂಂ ಮತ್ತೆ. ಎಲ್ಲರನ್ನೂ ಒಂದೇ ತಕ್ಕಡೀಲಿ ತೂಗೋಕೆ ಬರುತ್ತಾ?'

ಹೂಂಗುಟ್ಟಲಿಲ್ಲ ಮಮತಾ. ವಿರೋಧವನ್ನೂ ತೋರಿಸ ಹೋಗಲಿಲ್ಲ. ಮೊದಲೇ ಹೇಳಿದ ಹಾಗೆ ಅವರವರ ಅನುಭವ ಅವರವರದ್ದು.

ಪ್ರತಿಕ್ರಿಯಿಸಿ: **feedback@sudha.co.in**